ಸಾಕ್ಷಿಯನ್ನು ದಿಃ**18.02.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ವಿ ಜಿ ಎಂ ವಕೀಲರಿಂದಃ-**

ನನ್ನ ತಂದೆ ತೀರಿಕೊಳ್ಳುವ ಸಮಯದಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್ ಹನಗೋಡು ಶಾಖೆಯಲ್ಲಿ ಅವರ ಬ್ಯಾಂಕ್ ಖಾತೆಯಿತ್ತು. ಅವರು ತೀರಿಕೊಳ್ಳುವ ಕಾಲಕ್ಕೆ ಅವರ ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ಗೊತ್ತಿಲ್ಲ. ಇಂದಿನವರೆಗೂ ನಾನು ಅದನ್ನು ನೋಡಲು ಹೋಗಿಲ್ಲ. ಸದರಿ ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ನನ್ನ ತಾಯಿ ಅವರ ಜೀವಿತಾ ಕಾಲದಲ್ಲಿ ತೆಗೆದಿದ್ದಾರೆಯೇ ಇಲ್ಲವೇ ಗೊತ್ತಿಲ್ಲ. ನನಗೆ ಬಿ ಆರ್ ಕಾವಲ್ ಗ್ರಾಮದ ಸರ್ವೆ ನಂಬರ್ 36 ರಲ್ಲಿ 4 ಎಕರೆ ಜಮೀನು ಇದೆ. ಆ ಜಮೀನಿನ ಮೇಲೆ ಬ್ಯಾಂಕ್ ನಲ್ಲಿ ಸಾಲ ಮಾಡಿದ್ದೀರಾ ಎಂದರೆ ಸಾಲ ತೀರಿಸಿದ್ದೇನೆ. ಯಾವ ವರ್ಷ ಸಾಲ ಮಾಡಿದ್ದೀರಿ ಎಂದರೆ ಮರೆತು ಹೋಗಿದೆ. ಎಷ್ಟು ಸಾಲ ಎಂದರೆ 4 ಲಕ್ಷ ಇರಬಹುದು. ಯಾವ ವರ್ಷದಲ್ಲಿ ಸಾಲ ತೀರಿಸಿದ್ದೀರಿ ಎಂದರೆ ನೆನಪಿಲ್ಲ. ಬಿ ಆರ್ ಕಾವಲ್ ಗ್ರಾಮದಲ್ಲಿ 3 ನೇ ಪ್ರತಿವಾದಿಯ ಹೆಸರಿನಲ್ಲಿ 4 ಎಕರೆ ಜಮೀನು ಇದೆ ಎಂದರೆ ಸರಿ. ಅದರ ಸರ್ವೆ ನಂಬರ್ 35. ಸರ್ವೆ ನಂಬರ್ 36 ರಲ್ಲಿರುವ ನನ್ನ 4 ಎಕರೆ ಮತ್ತು ಸರ್ವೆ ನಂಬರ್ 35 ರಲ್ಲಿರುವ 3 ನೇ ಪ್ರತಿವಾದಿಯ 4 ಎಕರೆ ಜಮೀನು ಒಂದಕ್ಕೊಂದು ಲಗತ್ತಾಗಿದೆ ಎಂದರೆ ಸರಿ.

3 ನೇ ಪ್ರತಿವಾದಿ ಸರ್ವೆ ನಂಬರ್ 35 ರ ಜಮೀನಿನ ಮೇಲೆ ಹನಗೋಡು ಸೊಸೈಟಿಯಲ್ಲಿ ಸಾಲ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ನಮ್ಮ ಕುಟುಂಬದ ಹೆಸರಿನಲ್ಲಿ ಒಟ್ಟು ಮೂರು ತಂಬಾಕು ಲೈಸೆನ್ಸ್ ಇದೆ ಎಂದರೆ ಸರಿಯಲ್ಲ. ಎರಡು ಲೈಸೆನ್ಸ್ ಇದ್ದು ಒಂದು ತಂದೆಯ ಹೆಸರಿನಲ್ಲಿ, ಇನ್ನೊಂದು 3 ನೇ ಪ್ರತಿವಾದಿಯ ಹೆಸರಿನಲ್ಲಿದೆ. ನನ್ನ ತಂದೆಯ ಹೆಸರಿನಲ್ಲಿದ್ದ ಲೈಸೆನ್ಸ್ 13*13 ಅಳತೆಯ ಸಿಂಗಲ್ ಲೈಸೆನ್ಸ್ ಎಂದರೆ ಸರಿ. 3 ನೇ ಪ್ರತಿವಾದಿಯ ಹೆಸರಿನಲ್ಲಿ 16*24 ಅಳತೆಯ ಡಬಲ್ ಲೈಸೆನ್ಸ್ ಎಂದರೆ ಸರಿ. ಆ ಕಾರಣದಿಂದ ನಮ್ಮ ಕುಟುಂಬಕ್ಕೆ ಒಟ್ಟು ಮೂರು ಲೈಸೆನ್ಸ್ ಇದೆ ಎಂದರೆ ಸರಿಯಲ್ಲ. ಒಂದು ಲೈಸೆನ್ಸ್ ನ್ನು ವೈಯಕ್ತಿಕವಾಗಿ 3 ನೇ ಪ್ರತಿವಾದಿ ಗಳಿಸಿದ್ದಾರೆ. ತಂಬಾಕು ಮಂಡಳಿಯಿಂದ 3 ನೇ ಪ್ರತಿವಾದಿ ವೈಯಕ್ತಿಕ ಲೈಸೆನ್ಸ್ ಪಡೆದಿದ್ದಾರೆ. ಯಾವ ವರ್ಷ ಆ ಲೈಸೆನ್ಸ್ ತೆಗೆದುಕೊಂಡಿದ್ದಾರೆಂದು ಗೊತ್ತಿಲ್ಲ. ಸದರಿ ಲೈಸೆನ್ಸ್ ನನ್ನ ತಂದೆ ತೀರಿಕೊಳ್ಳುವ ಮೊದಲೆ ಇತ್ತು. 2015 ರ ಪಾಲುಪಾರಿಕತ್ತಿನ ಪ್ರಕಾರ ನನ್ನ ತಮ್ಮನ ಹೆಸರಿನಲ್ಲಿದ್ದ ಎರಡು ಲೈಸೆನ್ಸ್ ಗಳ ಪೈಕಿ ಒಂದು ಲೈಸೆನ್ಸ್ ನನ್ನ

ಹೆಸರಿಗೆ ಸೇರಿಬೇಕೆಂದು ಬರೆದಿದ್ದು, ಅದಕ್ಕೆ ನಾನು ಸಹಿ ಮಾಡಿದ್ದೇನೆಂದರೆ ಇಲ್ಲ. ಬಿ ಆರ್ ಕಾವಲ ಗ್ರಾಮದ ಸರ್ವೆ ನಂಬರ್ 35 ರಲ್ಲಿ ನನ್ನ ಹೆಸರಿನಲ್ಲಿರುವ 4 ಎಕರೆ ಜಮೀನು 3 ನೇ ಪ್ರತಿವಾದಿಗೆ ಸೇರಬೇಕೆಂದು 2015 ರ ಪಂಚಾಯತ್ ಪಾರಿಕತ್ತಿನಲ್ಲಿ ಬರೆದಿದ್ದು ಅದಕ್ಕೆ ನಾನು, ನನ್ನ ತಾಯಿ ಹಾಗೂ ನನ್ನ ಇಬ್ಬರು ಸಹೋದರರು ಸಹಿ ಹಾಕಿದ್ದೇವೆ ಎಂದರೆ ಸರಿಯಲ್ಲ.

ನನ್ನ ತಂದೆಯ ಮರಣಾನಂತರ ಅವರ ಹೆಸರಿನಲ್ಲಿದ್ದ ತಂಬಾಕು ಲೈಸೆನ್ಸ್ ನನ್ನ ತಾಯಿಯ ಹೆಸರಿಗೆ ವರ್ಗಾವಣೆಯಾಗಿದೆ. ನನ್ನ ತಂದೆಯ ಮರಣಾನಂತರ ತಂಬಾಕು ಲೈಸೆನ್ಸ್ ನನ್ನ ತಾಯಿಯ ಹೆಸರಿಗೆ ಬಂದು ಅವರ ನಂತರ 2 ನೇ ಪ್ರತಿವಾದಿಗೆ ಸೇರಬೇಕೆಂದು 2015 ರ ಪಂಚಾಯತ ಪಾರಿಕತ್ತಿನಲ್ಲಿ ಬರವಣಿಗೆಯಾಗಿದೆ ಎಂದರೆ ಸರಿಯಲ್ಲ. ಆ ಪ್ರಕಾರ ನನ್ನ ತಾಯಿ ತಂಬಾಕು ಲೈಸೆನ್ಸ್ ನ್ನು ವಿಭಾಗ ಮಾಡಿ 2 ನೇ ಪ್ರತಿವಾದಿಗೆ ನೋಂದಾಯಿಸಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಬಿ ಆರ್ ಕಾವಲನ ಸರ್ವೆ ನಂಬರ್ 36 ರಲ್ಲಿ 4 ಎಕರೆ ಜಮೀನು 1976-77 ರಲ್ಲಿ ನನಗೆ ಮಂಜೂರಾಗಿದೆ. ಅದೇ ರೀತಿ ಸರ್ವೆ ನಂಬರ್ 35 ರಲ್ಲಿ 4 ಎಕರೆ 3 ನೇ ಪ್ರತಿವಾದಿಗೆ ಯಾವ ವರ್ಷದಲ್ಲಿ ಮಂಜೂರಾಯಿತು ಎಂದು ಗೊತ್ತಿಲ್ಲ.

ಸರ್ವೆ ನಂಬರ್ 234 ರಲ್ಲಿರುವ 3 ಎಕರೆ 39 ಗುಂಟೆ ಜಮೀನು ಯಾವಾಗ ಭೂ ಪರಿವರ್ತನೆಯಾಯಿತು ಎಂದು ನನಗೆ ಗೊತ್ತಿಲ್ಲ. ನನ್ನ ಮಗನಿಗೆ ಗೊತ್ತಿದೆ. ನಿಮ್ಮ ತಾಯಿ ಜೀವಂತ ಇದ್ದಾಗ ಅಥವಾ ಮರಣಾನಂತರ ಭೂ ಪರಿವರ್ತನೆಯಾಗಿದೆಯೇ ಎಂದರೆ ಗೊತ್ತಿಲ್ಲ. 3 ಎಕರೆ 39 ಗುಂಟೆಯಲ್ಲಿ ಎಷ್ಟು ಕ್ಷೇತ್ರ ಭೂ ಪರಿವರ್ತನೆಯಾಗಿದೆ ಎಂದರೆ ಗೊತ್ತಿಲ್ಲ. ಈ ದಾವೆಯನ್ನು 9-10 ಸ್ವತ್ತುಗಳ ವಿರುದ್ಧ ಹಾಕಿದ್ದೇನೆ. ಯಾವ ಯಾವ ಆಸ್ತಿಗಳು ಎಂದರೆ ಎಲ್ಲಾ ಸರ್ವೆ ನಂಬರ್ ನೆನಪಿಲ್ಲ. ಗೊತ್ತಿರುವ ಸರ್ವೆ ನಂಬರ್ ಮತ್ತು ಕ್ಷೇತ್ರ ಹೇಳಿ ಎಂದರೆ ಗೊತ್ತಿಲ್ಲ. ತಂಬಾಕು ಮಂಡಳಿಯಿಂದ ನೀಡಿದ ಲೈಸೆನ್ಸ್ ನ್ನು ದಾವಾ ಸ್ವತ್ತಿನಲ್ಲಿ ಸೇರಿಸಿದ್ದೇನೆ. 3 ನೇ ಪ್ರತಿವಾದಿಯ ಹೆಸರಿನಲ್ಲಿದ್ದ ಡಬಲ್ ಲೈಸೆನ್ಸ್ ನ್ನು ಸೇರಿಸಿದ್ದೀರಾ ಎಂದರೆ ಅದು ಅವರ ವೈಯಕ್ತಿಕ ಲೈಸೆನ್ಸ್ ಆದ ಕಾರಣ ಸೇರಿಸಿಲ್ಲ.

ನನ್ನ ತಾಯಿ ತೀರಿಕೊಳ್ಳುವ ಒಂದು ತಿಂಗಳ ಹಿಂದೆ ನಾನು ಮತ್ತು ನನ್ನ ಸಹೋದರರು ಸೇರಿ ಅವರ ಸ್ವಯಾರ್ಜಿತ ಆಸ್ತಿಗಳ ಬಗ್ಗೆ ದಾಖಲೆಗಳನ್ನು ಮಾಡಿಕೊಂಡ ಬಗ್ಗೆ ಉಪವಿಭಾಗಧಿಕಾರಿಗಳ ನ್ಯಾಯಾಲಯದಲ್ಲಿ ಜೀವನಾಂಶ ಮತ್ತು ಆಸ್ತಿ ವಾಪಸ್ಸಾತಿ ಕೋರಿ ಅರ್ಜಿ ಸಲ್ಲಿಸಿದ್ದರು ಎಂದರೆ ನಾವು ಸಿವಿಲ್ ದಾವೆ ಸಲ್ಲಿಸಿದ ನಂತರ ಆ ಅರ್ಜಿ ಹಾಕಿದ್ದಾರೆ. ನನ್ನ ತಂದೆಯ ಮರಣಾನಂತರ ನಾವು ಮೂರು ಜನ ಸಹೋದರರು ಪ್ರತ್ಯೇಕವಾಗಿ ವಾಸಯಿದ್ದು ಕೊಂಡು ಜಮೀನುಗಳನ್ನು ಪ್ರತ್ಯೇಕವಾಗಿ ಮಾಡಿಕೊಂಡು ವ್ಯವಹಾರಗಳನ್ನು ಪ್ರತ್ಯೇಕವಾಗಿ ಮಾಡಿಕೊಂಡಿದ್ದೇವೆ ಎಂದರೆ ಪ್ರತ್ಯೇಕವಾಗಿ ವಾಸಯಿದ್ದೇವೆ ಆದರೆ ಜಮೀನುಗಳನ್ನು ಒಟ್ಟಾಗಿ ಮಾಡಿಕೊಳ್ಳುತ್ತಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಾಯಿ ಸಾಯುವ ಪೂರ್ವದಲ್ಲಿ 2015 ರಲ್ಲಿ ಆದ ಪಂಚಾಯತ ಪಾರಿಕತ್ತಿನಲ್ಲಿ ಎರಡನೇ ಪ್ರತಿವಾದಿಯ ಹಿಸ್ಸೆಗೆ ಇಟ್ಟಂತಹ ಆಸ್ತಿಗಳ ಬಗ್ಗೆ ಮಾತ್ರ ವಿಭಾಗ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಯಾವುದೇ ಪಂಚಾಯತ ಪಾರಿಕತ್ತು ಆಗಿಲ್ಲ. ನನ್ನ ತಂದೆಯ ಮರಣಾನಂತರ ಪೌತಿ ಖಾತೆಯ ಮೂಲಕ ನನ್ನ ತಾಯಿಯ ಹೆಸರಿಗೆ ಬಂದ ಎಲ್ಲಾ ಆಸ್ತಿಗಳನ್ನು 2 ನೇ ಪ್ರತಿವಾದಿಗೆ ನನ್ನ ತಾಯಿ ಬರೆದುಕೊಟ್ಟಿಲ್ಲ. 2015 ರ ಪಂಚಾಯತ ಪಾರಿಕತ್ತಿನ ಪ್ರಕಾರ 2 ನೇ ಪ್ರತಿವಾದಿಗೆ ಹೋಗಬೇಕಾದ ಆಸ್ತಿಗಳನ್ನು ಮಾತ್ರ ನನ್ನ ತಾಯಿ ಅವರ ಹೆಸರಿಗೆ ವಿಭಾಗ ಪತ್ರ ಮಾಡಿಕೊಟ್ಟು ಉಳಿದ ಎಲ್ಲಾ ಆಸ್ತಿಗಳು ಈಗಲೂ ಕೂಡ ನನ್ನ ತಾಯಿಯ ಹೆಸರಿನಲ್ಲಿಯೆ ಮುಂದುವರೆದಿದೆ ಎಂದರೆ ಅದನ್ನು ತಾಯಿಯ ಜೀವನಾಂಶಕ್ಕಾಗಿ ಇಟ್ಟುಕೊಂಡಿದ್ದರು. ಅದರ ಖಾತೆಗಳು ಇಂದಿಗೂ ಕೂಡ ನನ್ನ ತಾಯಿಯ ಹೆಸರಿನಲ್ಲಿ ಮುಂದುವರೆದಿದೆ ಎಂದರೆ ಸರಿ.

ಈ ದಾವೆ ಎರಡನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಂಡಿದ್ದೇನೆ. 2 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ 2015 ರ ಪಂಚಾಯತ ಪಾರಿಕತ್ತಿನ ಮೂಲಕ ತನಗೆ ಬರಬೇಕಾದ ಎಲ್ಲಾ ಆಸ್ತಿಗಳು ಬಂದಿದ್ದು, ನಿಮಗೆ ಬರಬೇಕಾದ ಆಸ್ತಿಗಳ ಬಗ್ಗೆ ನೀವು ಕರೆದಾಗ ಬಂದು ಸಹಿ ಹಾಕಲು ಸಿದ್ಧನಿದ್ದೇನೆ ಎಂದು ಹೇಳಿರುವ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ. 2 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಸರ್ವೆ ನಂಬರ್ 232/2 ಎ ಯಲ್ಲಿರುವ 28 ಗುಂಟೆಯಲಪಿ್ಲಿ ಈಗಾಗಲೇ 3 ನೇ ಪ್ರತಿವಾದಿ ಕಟ್ಟಿರುವ 4 ಗುಂಟೆಯಲ್ಲಿರುವ ಬ್ಯಾರೆನ್ ಬರೆದುಕೊಡಲು ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ ಎಂದರೆ ಗೊತ್ತಿಲ್ಲ. 2015 ರ

ಪಂಚಾಯತ ಪಾರಿಕತ್ತಿನ ಪ್ರಕಾರ ನನ್ನ ಮತ್ತು ನನ್ನ ಸಹೋದರರ ಮಧ್ಯೆ ವಿಭಾಗ ಆಗಿ ಪ್ರತ್ಯೇಕ ಸ್ವಾಧೀನ ಹೊಂದಿದ್ದರೂ ಕೂಡ ಹಾಗೂ 2 ನೇ ಪ್ರತಿವಾದಿ ಆ ಬಗ್ಗೆ ವಿಭಾಗ ಪತ್ರ ಬರೆದುಕೊಡಲು ಸಿದ್ಧರಿದ್ದರೂ ಕೂಡ ಅನ್ಯಥಾ ಫಾಯಿದೆ ಪಡೆಯಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ-**

ನಾನು ಸಲ್ಲಿಸಿದ ಅಸಲು ದಾವೆ ಸಂಖ್ಯೆ 127/2020 ರ ಎಲ್ಲಾ ದಾವಾ ಸ್ವತ್ತುಗಳಲ್ಲಿ 3 ನೇ ಪ್ರತಿವಾದಿಗೂ ಕೂಡ ಸಮಾನಾದ ಹಿಸ್ಸೆಯ ಹಕ್ಕು ಇದೆ ಎಂದರೆ ಸರಿ. ಬಿ ಆರ್ ಕಾವಲು ಗ್ರಾಮದ ಸರ್ವೆ ನಂಬರ್ 35 ರಲ್ಲಿ 3 ನೇ ಪ್ರತಿವಾದಿಗೆ ಮಂಜೂರಾದ 4 ಎಕರೆಯಲ್ಲಿ ನನಗಾಗಲೀ 2 ನೇ ಪ್ರತಿವಾದಿಗಾಗಲೀ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿ.

**ಪಾಟೀ ಸವಾಲುಃ ಅಸಲು ದಾವೆ ಸಂಖ್ಯೆ 83/2021 ರ 3 ನೇ ಪ್ರತಿವಾದಿ ಪರ ಶ್ರೀ ಎಂ ಎನ್ ಎಲ್ ವಕೀಲರಿಂದಃ-**

ಕಾಲಾವಕಾಶ ಕೋರಿದ್ದು ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.